VIJAYAKUMAR KANNUR
Digitally signed by VIJAYAKUMAR KANNUR
Date: 2025.06.17 10:29:32 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 16.06.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಸಿ ಯು ವಕೀಲರಿಂದ :**

1984 ರಲ್ಲಿ ಆಗಿದೆ ಎನ್ನಲಾದ ವಾಟ್ನಿಗೆ ಸಂಬಂಧಪಟ್ಟಂತೆ ಆ ದಾಖಲೆಯನ್ನು ಪಡೆದುಕೊಳ್ಳಲು ತಹಶೀಲ್ದಾರ್ ಕಚೇರಿಯಲ್ಲಿ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಆ ವಾಟ್ನಿಯನ್ನು ಕಾನೂನು ಬದ್ದವಾಗಿ ಮಾಡಿಕೊಂಡಿಲ್ಲ ಮತ್ತು ಸರಕಾರಕ್ಕೆ ಹಣವನ್ನು ಸಹ ಸಂದಾಯ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆ ವಾಟ್ನಿಯ ಸಮಯದಲ್ಲಿ ವಾದಿ ನಂ. 3 ರವರ ಒಪ್ಪಿಗೆಯನ್ನು ಪಡೆದಿರುವುದಿಲ್ಲ ಎಂದರೆ ಸಾಕ್ಷಿ ನುಡಿಯುವುದೇನೆಂದರೆ ತಮ್ಮ ಕುಟುಂಬಕ್ಕೆ ಸಂಬಂಧಪಟ್ಟಿರುವ ಸದಸ್ಯರ ಸಹಿಗಳನ್ನು ಮಾತ್ರ ಪಡೆದುಕೊಂಡಿರುವುದಾಗಿ ಸಾಕ್ಷಿ ಉತ್ತರಿಸುವರು.

2. ನಮ್ಮ ಮನೆತನದ ಹೇಳವರು ಪ್ರತಿವರ್ಷ ನಮ್ಮ ಮನೆಗೆ ಬಂದು ಹೋಗುತ್ತಾರೆ, ಆದರೆ ಅವರ ಹೆಸರು ನನಗೆ ಹೇಳಲು ಬರುವುದಿಲ್ಲ. ನಮ್ಮ ಅಜ್ಜನ ಕಾಲದಿಂದಲೂ ನಮ್ಮ ಮನೆತನಕ್ಕೆ ಪ್ರತಿವರ್ಷ ಹೇಳವರು ಬರುತ್ತಾರೆ ಎಂದರೆ ಸರಿ. ಅವರ ಖಾತಾ ಪುಸ್ತಕದಲ್ಲಿ ನಾವು ಅವರು ಬಂದಾಗ ಸಹಿಯನ್ನು ಮಾಡುತ್ತೇವೆ . ಆ ಹೇಳವರಿಗೆ ಕುಟುಂಬದಲ್ಲಿನ ಸದಸ್ಯರ ಮರಣ , ಜನನ ಮತ್ತು ವಿವಾಹವಾದ ಬಗ್ಗೆ ಪ್ರತಿವರ್ಷ ನೀಡುತ್ತೀರಿ ಎಂದರೆ ಸಾಕ್ಷಿ ನುಡಿಯುವುದೇನೆಂದರೆ ಕೇವಲ ಜನನ ಮತ್ತು ಮರಣದ ಬಗ್ಗೆ ಹೇಳುತ್ತೇವೆ ಎಂದು ಸಾಕ್ಷಿ ಉತ್ತರಿಸುವರು.

3. ನನಗೆ ನನ್ನ ಅಜ್ಜನಾದ ಬಸಪ್ಪನ ಬಗ್ಗೆ ಮಾತ್ರ ಗೊತ್ತಿರುವುದು. ಇತನಿಗೆ 7 ಜನ ಮಕ್ಕಳು. ಅವರೆಂದರೆ ಬಸಲಿಂಗಪ್ಪ, ಶಿವರಾಜಪ್ಪ , ಸಿದ್ದಪ್ಪ, ಗೌರವ್ವ, ಶಿವಗಂಗವ್ವ, ಸಾವಕ್ಕ ಮತ್ತು ಭೋರವ್ವ ಎಂಬುವರರು. ಬಸಲಿಂಗಪ್ಪನ ಹೆಂಡತಿಯ ಹೆಸರು ಶಿವಕ್ಕ. ಇವರ ಮಕ್ಕಳೆಂದರೆ

ಶ್ರೀಶೈಲ್ , ಬಸವರಾಜ , ಶಿವಾನಂದ, ಈಶ್ವರ, ಗಂಗಾಧರ, ರಾಜಶೇಖರ, ದೇವರಾಜ, ರತ್ನ, ಗಂಗವ್ವ, ಮಹೇಶ್ವರಿ, ಲಕ್ಷ್ಮೀಬಾಯಿ ಮತ್ತು ಕಮಲಾಕ್ಷ್ಮೀ ಎಂಬುವವರು. ಶಿವರಾಯನ ಹೆಂಡತಿಯ ಹೆಸರು ಮಹಾಲಿಂಗವ್ವ. ಇವರ ಮಕ್ಕಳೆಂದರೆ ಅಶೋಕ , ಬಸವರಾಜ, ಕಾಶವ್ವ, ಕಮಲವ್ವ ಹಾಗೂ ಇನ್ನೊಬ್ಬ ಹೆಣ್ಣು ಮಗಳು ಇರುವಳು. ಸಿದ್ದಪ್ಪ ಎಂಬುವವರು ನನ್ನ ತಂದೆ ಆಗಿರುವರು. ನನ್ನ ತಾಯಿಯ ಹೆಸರು ಪಾರ್ವತೆವ್ವ . ಇವರಿಗೆ ನಾನು, ಮಲ್ಲಿಕಾರ್ಜುನ , ಶಂಕರ, ಪ್ರಭು, ಶಿವಕ್ಕಮ್ಮ, ರಾಜೇಂದ್ರ ಎಂಬುವವರು ಮಕ್ಕಳು.

4. ನನ್ನ ತಾಯಿಯಾದ ಪಾರ್ವತೆವ್ವ ಮೃತ ಪಟ್ಟ ನಂತರ ನನ್ನ ತಂದೆ ಭಾಗೀರಥಿ ಎಂಬುವವರನ್ನು 2 ನೇ ವಿವಾಹ ಮಾಡಿಕೊಂಡಿರುವರು. ಇವರಿಗೆ ಶ್ರೀಶೈಲ್ ಮತ್ತು ರೇಣುಕಾ ಅಲಿಯಾಸ್ ಯಲ್ಲವ್ವ ಎಂಬ ಇಬ್ಬರು ಮಕ್ಕಳು. ಭಾಗಮ್ಮಳು ಸಹ ಮೃತ ಪಟ್ಟಿರುವಳು. ಇವಳು ಮೃತ ಪಟ್ಟ ನಂತರ ನನ್ನ ತಂದೆ ಕಸ್ತೂರೆವ್ವ ಎಂಬುವಳನ್ನು 3 ನ್ೇ ಮದವೆ ಮಾಡಿಕೊಂಡಿರವರು ಎಂದರೆ ಸರಿಯಲ್ಲ. ಇವರಿಗೆ ಸಂಜು ಮತ್ತು ಮಂಜುಳಾ ಎಂಬ ಇಬ್ಬರು ಮಕ್ಕಳು ಇರುವರು ಎಂದರೆ ಸರಿಯಲ್ಲ.

5. ಪ್ರತಿವರ್ಷ ಹೇಳವರು ಯಾದವಾಡ ಗ್ರಾಮದ ನಮ್ಮ ಮನೆಗೆ ಬರುತ್ತಿದ್ದರು ಎಂದರೆ ಸಾಕ್ಷಿ ನುಡಿಯುವುದೇನೆಂದರೆ ತಾನು 25 ವರ್ಷ ಗಳ ವರೆಗೆ ಗೋಕಾಕದ ಶೂಗರ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದು ಈಗ ನಿವೃತ್ತಿಯಾದ ನಂತರ ಈಗ ನಾನು ಯಾದವಾಡ ಗ್ರಾಮದಲ್ಲಿ ವಾಸವಾಗಿದ್ದು ಈಗ ಹೇಳವರು ನಮ್ಮ ಮನೆಗೆ ಹೋಗಿ ಬಂದು ಮಾಡುವುದರ ಬಗ್ಗೆ ನನಗೆ ಮಾಹಿತಿ ಇರುವುದು. ಹೇಳವರು ನಮ್ಮ ಮನೆಗೆ ಬಂದಾಗ ಅವರಿಗೆ ನಮ್ಮ ಕುಟುಂಬ ಸದಸ್ಯರು ಮಾಹಿತಿ ನೀಡುತ್ತಿದ್ದರು ಎಂದರೆ ಸರಿ. ನನ್ನ ಹೆಂಡತಿಯ ಹೆಸರು ಮಹಾದೇವಿ . ನನಗೆ ಮೂರು ಜನ ಮಕ್ಕಳು ಎಂದರೆ ಸರಿ. ಅವರೆಂದರೆ ಈರಣ್ಣ , ಪಾರ್ವತಿ ಮತ್ತು ಮುರುಗೇಶ್ ಎಂಬುವವರು. ವಾದಿಯರು ಹಾಜರು ಪಡಿಸಿರುವ ಹೇಳವರ ದಾಖಲೆಯ ಪ್ರಕಾರ ನನ್ನ ತಂದೆ ವಾದಿ 3 ರವರನ್ನು 3 ನೇ ವಿವಾಹ ಮಾಡಿಕೊಂಡಿರುವ ಬಗ್ಗೆ ಹೇಳವರನ್ನು ಸಾಕ್ಷಿಯನ್ನಾಗಿ ವಿಚಾರಣೆಗೆ ಒಳಪಡಿಸಿಕೊಂಡಿದ್ದು ಅವರು ಹಾಜರು ಪಡಿಸಿರುವ ದಾಖಲೆಯ ಪ್ರಕಾರ ವಾದಿ 1 ಮತ್ತು 2 ರವರು ವಾದಿ 3 ಮತ್ತು ನನ್ನ ತಂದೆಯ 3

ನೇ ವೈವಾಹಿಕ ಜೀವನದಿಂದ ಜನ್ಮ ತಾಳಿರುವರು ಎಂದರೆ ಸರಿಯಲ್ಲ.

6. ಮಲ್ಲಪ್ಪ ಅಪ್ಪನ ಹೇಳವರ ಹಾಗೂ ಇತನ ತಂದೆ ಹಾಗೂ ಅಜ್ಜನ ಕಾಲದಿಂದಲೂ ನಮ್ಮ ಮನೆಯ ಹೇಳವರು ಆಗಿರುವರು ಎಂದರೆ ಸರಿಯಲ್ಲ. ನಮ್ಮ ಮನೆತನ ಹೇಳವನ ಹೆಸರು ಅಪ್ಪನ್ನ ಹೇಳವರ್ ಅಂತ ಇರುವುದು. ಈತನ ಸ್ವಂತ ಊರು ದೂದಗಟ್ಟಿ ಗ್ರಾಮ ಎಂದರೆ ಸರಿ. ಮಲ್ಲಪ್ಪ ಅಪ್ಪನ್ನ ಹೇಳವರ್ ನಮ್ಮ ಮನೆಗೆ ಬಂದಿರುವುದಿಲ್ಲ ಹಾಗೂ ಇತ ನಮ್ಮ ಮನೆತನದ ಹೇಳವರ್ ಸಹ ಆಗಿರುವುದಿಲ್ಲ, ಈತನ ತಂದೆ ಅಪ್ಪನ್ನ ಹೇಳವರ್ ಮಾತ್ರ ನಮ್ಮ ಮನೆತನದ ಹೇಳವರ್ ಆಗಿರುವನು. ಅಪ್ಪನ್ನ ಹೇಳವರ್ ನಮ್ಮ ಕುಟುಂಬದ ಪೂರ್ವಜರ ಬಗ್ಗೆ ಸಂಪೂರ್ಣ ಮಾಹಿತಿ ನೀಡುತ್ತಿದ್ದ ಎಂದರೆ ಸರಿ. ಈ ವರ್ಷ ಅಪ್ಪನ್ನ ಹೇಳವರ್ ನಮ್ಮ ಮನೆಗೆ ಬಂದಿರುವುದಿಲ್ಲ. ಇತನಿಗೆ 80 ಕ್ಕಿಂತ ಹೆಚ್ಚಿನ ವಯಸ್ಸು ಆಗಿದೆ ಎಂದರೆ ಸರಿಯಲ್ಲ, 60-70 ವರ್ಷಗಳ ವಯಸ್ಸು ಆಗಿರಬಹುದು. ಅಪ್ಪನ್ನ ಹೇಳವರ್ ನಿಗೆ ವಯಸ್ಸು ಆಗಿರುವುದರಿಂದ ಆತನಿಗೆ ಎಲ್ಲಾ ಕಡೆ ತಿರುಗಾಡಲು ಆಗದೆ ಇರುವುದರಿಂದ ಆತನ ಮಗನನ್ನು ಮನೆಗಳಿಗೆ ಕಳುಹಿಸಿಕೊಡುತ್ತಿದ್ದನು ಎಂದರೆ ಸರಿಯಲ್ಲ. ಏಕೆಂದರೆ ಅಪ್ಪನ್ನ ಹೇಳವರ್ ಆತ ನಮ್ಮ ಮನೆಗಳಿಗೆ ಬಂದು ನಮ್ಮ ಪೂರ್ವಜರ ಬಗ್ಗೆ ಮಾಹಿತಿ ನೀಡುತ್ತಿದ್ದನು. ಅಪ್ಪನ್ನ ಹೇಳವರ್ ಮತ್ತು ಮಲ್ಲಪ್ಪ ಅಪ್ಪನ್ನ ಹೇಳವರ್ ಇವರು ಬೇರೆ ಬೇರೆ ಹೇಳವರ್ ಆಗಿರುವುದಿಲ್ಲ, ಇವರು ಒಂದೇ ಕುಟುಂಬದ ಸದಸ್ಯರು ಆಗಿದ್ದು ಇವರು ಸಹ ನಮ್ಮ ಮನೆಗಳಿಗೆ ಬಂದು ನಮ್ಮ ಕುಟುಂಬದ ಪೂರ್ವಜರ ಬಗ್ಗೆ ಮಾಹಿತಿ ನೀಡುತ್ತಾ ಇದ್ದರು ಎಂದರೆ ಸರಿಯಲ್ಲ. ಇವರು ವಂಶಪಾರಂಪರಿಕವಾಗಿ ಈ ಹೇಳವರ್ ವೃತ್ತಿಯನ್ನು ಮಾಡುತ್ತಾ ಬಂದಿರುವರು ಎಂದರೆ ಸಾಕ್ಷಿ ನುಡಿಯುವುದೇನೆಂದರೆ ಮಲ್ಲಪ್ಪ ಅಪ್ಪನ್ನ ಹೇಳವರ್ ಇವರು ಬೇರೆ ಎಂದು ಸಾಕ್ಷಿ ಉತ್ತರಿಸುವರು. ಈ ಸಂಗತಿಯನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರ ಪರವಾಗಿ ಹಾಜರು ಪಡಿಸಿರುವ ಹೇಳವರ್ ದಾಖಲೆಗಳು ನಿಜವಿರುವುದು ಎಂದರೆ ಸರಿಯಲ್ಲ. ಅಪ್ಪನ್ನ ಹೇಳವರ್ ಆತ ನಮ್ಮ ಕುಟುಂಬದ ಬಗ್ಗೆ ಪುಸ್ತಕದಲ್ಲಿ ಬರೆದುಕೊಂಡಿರುವ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಈ ಪುಸ್ತಕವನ್ನು ಹಾಜರು ಪಡಿಸಲು ನಮಗೆ ಅವಶ್ಯಕತೆ ಇರುವುದರಿಂದ ಅದನ್ನು ಹಾಜರು ಪಡಿಸಿರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರುತ್ತಾರೆ, ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

VIJAYAKUMAR KANNUR

Digitally signed by VIJAYAKUMAR KANNUR
Date: 2025.06.17 10:29:41 +0530

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ